# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ಸೆರೆಯಾಳಾದ ದಾನಿಯೇಲನು




ಬರಹಗಾರರು: Edward Hughes
ಚಿತ್ರಲೇಖಕರು: Jonathan Hay
ಅಳವಡಿಸುವವರು: Mary-Anne S.
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada



©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.




ದಾನಿಯೇಲನು ಮತ್ತು ಆತನ ಮೂವರು ಸ್ನೇಹಿತರು ಇಸ್ರಾಯೇಲಿನಲ್ಲಿ ವಾಸವಾಗಿದ್ದರು. ಒಂದು ದಿನ ಮಹಾ ಅರಸನು ಅವರ ಸ್ಥಳಕ್ಕೆ ಬಂದು ಎಲ್ಲಾ ಚುರುಕಾದ ಯುವಕರನ್ನು ಸೆರೆಯಾಳಾಗಿ ತನ್ನ ದೇಶಕ್ಕೆ ಕರೆದುಕೊಂಡು ಹೋದನು. ಅರಸನಿಗೆ ನೆಬೂಕದ್ನೆಚ್ಚರನೆಂಬ ಉದ್ದವಾದ ಹೆಸರಿತ್ತು. ಆತನು ದೂರದ ಬಾಬಿಲೋನನಿಲ್ಲಿ ವಾಸವಾಗಿದ್ದನು.



ಬಾಬಿಲೋನಿನಲ್ಲಿ ಯೌವನಸ್ಥರು ಒಳ್ಳೆಯ ರೀತಿಯಲ್ಲಿ ಸತ್ಕರಿಸಲ್ಪಡುತ್ತಿದ್ದರು. ಅರಸನು ಪ್ರಪಂಚದ ಎಲ್ಲಾ ದೇಶಗಳಿಂದ ಸುಂದರರೂ ಸಮರ್ಥರಾದ ಯುವಕರನ್ನು ನೇಮಕ ಮಾಡಿದನು. ಮುಂದೆ ಅವರು ಆತನಿಗೆ ಸೇವಕರಾಗಿ ದೇಶವನ್ನು ಮುನ್ನಡೆಸುವುದಕ್ಕೆ ಸಹಾಯಕರಾಗಿ ಇರುವುದಕ್ಕೆ ಬಾಬಿಲೋನ್ ಭಾಷೆಯಲ್ಲಿ ಅವರಿಗೆ ತರಬೇತಿಯನ್ನು ಕೊಡಲು ಯೋಚಿಸಿದನು.



3

ಆಹಾರವು ಕೂಡ ಬಹಳ ಬಳ್ಳೆಯದಾಗಿತ್ತು. ಈ ಯೌವನಸ್ಥರು ರಾಜನು ತಿನ್ನುವ ಆಹಾರವನ್ನು ತಿನ್ನಬೇಕು. ಆದರೆ ದಾನಿಯೇಲನು ಮತ್ತು ಆತನ ಸ್ನೇಹಿತರು ಆಹಾರವನ್ನು ತಿನ್ನಲಿಕ್ಕೆ ಇಷ್ಟಪಡಲಿಲ್ಲ ಯಾಕೆಂದರೆ ಅದು ಸುಳ್ಳು ದೇವರುಗಳಿಗೆ ಮೀಸಲಿಟ್ಟಿರುವ ಆಹಾರವಾಗಿತ್ತು. ದಾನಿಯೇಲನು ತನ್ನ ದೇವರಿಗೆ ವಿರುದ್ಧವಾಗಿ ಏನನ್ನು ಮಾಡುವುದಿಲ್ಲವೆಂಬುದಾಗಿ ಪ್ರಮಾಣ ಮಾಡಿದ್ದನು. ವಿಗ್ರಹಗಳಿಗೆ ಅಥವಾ ಸುಳ್ಳು ದೇವರುಗಳಿಗೆ ಏನನ್ನೂ ಮಾಡಬಾರದೆಂಬುದಾಗಿ ಇಸಾಯೇಲ್ಯರ ದೇವರು ತನ್ನ ಜನರಿಗೆ ಆಜ್ಞಾಪಿಸಿದ್ದನು.



4

ದಾನಿಯೇಲನು ರಾಜನ ಭೋಜನ ಪದಾರ್ಥಗಳನ್ನು ತಿನ್ನುವುದಿಲ್ಲ ಎಂಬುದಾಗಿ ರಾಜನು ನೇಮಿಸಿರುವ ಅಧ್ಯಕ್ಷನಿಗೆ ಅನುಮತಿಯನ್ನು ಕೇಳಿದನು. ಇದು ಗೋತ್ತಾದರೆ ರಾಜನು ಕೋಪಿಸಿಗೊಳ್ಳಬಹುದು. ಆದರೆ ದೇವರು ದಾನಿಯೇಲನನ್ನು ಈ ಮನುಷ್ಯನೊಂದಿಗೆ ಪ್ರೀತಿ ಪ್ರಿಯನನ್ನಾಗಿ ಮಾಡಿದನು.



5

ದಾನಿಯೇಲ ಮತ್ತು ಆತನ ಸ್ನೇಹಿತರನ್ನು ಪರೀಕ್ಷೆಗೊಳಪಡಿಸಲು ಆತನು ಒಪ್ಪಿದನು. ಅವರು ಹತ್ತು ದಿನಗಳವರೆಗೂ ಕಾಯಿಪಲ್ಯಗಳನ್ನು ತಿಂದು ನೀರನ್ನು ಮಾತ್ರವೇ ಕುಡಿಯಬೇಕು. ಹತ್ತು ದಿನಗಳಾದ ನಂತರ ರಾಜನ ಆಹಾರವನ್ನು ತಿಂದ ಎಲ್ಲಾ ಯುವಕರಿಗಿಂತ ಸುಂದರರಾಗಿಯೂ ಪುಷ್ಟರಾಗಿಯೂ ಕಾಣಿಸಿಕೊಂಡರು. ಇದರಿಂದ ಅವರು ಕಾಯಿಪಲ್ಯವನ್ನು ಮತ್ತು ನೀರನ್ನು ಮುಂದುವರಿಸಲು ಅನುಮತಿಯನ್ನು ಹೊಂದಿದರು.



6

ಈ ಯುವಕರು ದೇವರನ್ನು ಸನ್ಮಾನಿಸಿದರು. ದೇವರು ಇವರನ್ನು ಸನ್ಮಾನಿಸಿದನು. ದೇವರು ಆ ಯುವಕರಿಗೆ ಅವರು ಕಲಿತಂತ ಸಕಲ ವಿದ್ಯೆಯಲ್ಲಿ ಜ್ಞಾನವನ್ನು ದಯಪಾಲಿಸಿದನು ಮತ್ತು ದಾನಿಯೇಲನು ಸಮಸ್ತ ಸ್ವಪ್ನಗಳನ್ನು ದಿವ್ಯ ದರ್ಶನಗಳನ್ನು ಗ್ರಹಿಸುವುದರಲ್ಲಿ ಜ್ಞಾನವನ್ನು ಹೊಂದಿದನು.



7



ಬಾಬಿಲೋನಿನ ಮೂರು ವರ್ಷಗಳ ತರಬೇತಿಯ ನಂತರ, ಎಲ್ಲಾ ಯುವಕರು ರಾಜನಾದ ನೆಬೂಕದ್ನಚ್ಚರನ ಮುಂದೆ ಹಾಜರಾಗಬೇಕಿತ್ತು. ಆತನು ಎಲ್ಲಾ ಮೂರು ಸ್ನೇಹಿತರಲ್ಲಿ ಉತ್ತಮನಾದ ದಾನಿಯೇಲನನ್ನು ಆರಿಸಿಕೊಂಡನು ಮತ್ತು ರಾಜನು ತನ್ನ ರಾಜ್ಯದ ಎಲ್ಲಾ ಜ್ಞಾನಿಗಳಲ್ಲಿ ದಾನಿಯೇಲನು ಹೆಚ್ಚಾದ ಜ್ಞಾನವನ್ನು ಹೊಂದಿದ್ದಾನೆಂಬುದಾಗಿ ಕಂಡುಕೊಂಡನು.

8

ಒಂದು ರಾತ್ರಿ ಅರಸನಿಗೆ ಕನಸು ಬಿತ್ತು. ಆತನ ಜೋಯಿಸರನ್ನು, ಮಂತ್ರವಾದಿಗಳನ್ನು ಮತ್ತು ಮಾಟಗಾರರನ್ನು ತನ್ನ ಮುಂದೆ ಬಂದು ನಿಲ್ಲಲು ಕರೆದನು. “ನಾನು ಒಂದು ಕನಸನ್ನು ಕಂಡೆನು, ಅದರ ಅರ್ಥವೇನು ಎಂದು ನನ್ನ ಮನಸ್ಸು ತತ್ತರಗೊಂಡಿದೆ” ಎಂದು ಅರಸನು ಹೇಳಿದನು. ಪಂಡಿತರು ‘ಓ ಅರಸನೇ ಚಿರಂಜೀವಿಯಾಗಿರು, ಕನಸನ್ನು ನಿನ್ನ ಸೇವಕರಿಗೆ ಹೇಳು, ನಾವು ಅದರ ಅರ್ಥವನ್ನು ತಿಳಿಸುವೆವು’ ಎಂದು ಹೇಳಿದರು.



9

ರಾಜನು ಪ್ರತ್ಯುತ್ತರವಾಗಿ, ಇಲ್ಲ! ನಾನು ಕಂಡ ಕನಸನ್ನು ಅದರ ಅರ್ಥವನ್ನು ನೀವು ಹೇಳಲೇಬೇಕು. ನೀವು ಹೇಳದಿದ್ದರೆ ನೀವು ಚೂರು ಚೂರಾಗಿ ಕತ್ತರಿಸಲ್ಪಡುವಿರಿ, ನಿಮ್ಮ ಮನೆಗಳು ಸುಟ್ಟುಹಾಕಲ್ಪಡುತ್ತವೆ. ರಾಜನು ಮುಂದುವರಿಸುತ್ತಾ, ಆದರೆ ‘ನೀವು ನನ್ನ ಕನಸನ್ನು ಅದರ ಅರ್ಥವನ್ನು ಹೇಳಿದರೆ ನೀವು ಬಹುಮಾನಗಳನ್ನು ಮತ್ತು ದಾನಗಳು, ವಿಶೇಷ ಸನ್ಮಾನವನ್ನು ಹೊಂದುವಿರಿ’ ಅಂದನು.



10

ರಾಜನ ಪಂಡಿತರು ರಾಜನಿಗೆ “ನೀನು ಕೇಳಲಿಕ್ಕಿರುವ ಸಂಗತಿಯನ್ನು ತಿಳಿಸಬಲ್ಲ ವ್ಯಕ್ತಿ ಈ ಭೂಮಿಯ ಮೇಲೆ ಯಾರು ಇಲ್ಲ, ನರ ಜನ್ಮದವರ ಮಧ್ಯೆ ವಾಸಿಸದ ದೇವತೆಗಳೇ ಹೊರತು ಇನ್ಯಾರು ತಿಳಿಸುವುದಿಲ್ಲ” ಎಂದು ಹೇಳಿದರು. ರಾಜನು ಬಹಳ ಕೋಪಗೊಂಡು, ಬಾಬೆಲಿನ ಸಕಲ ಜ್ಞಾನಿಗಳನ್ನು ಕೊಲ್ಲಬೇಕೆಂದು ಆಜ್ಞಾಪಿಸಿದನು.



11

ಸೈನಿಕರು ದಾನಿಯೇಲ ಬಳಿಗೆ ಬಂದಾಗ ಆತನು ರಾಜನ ನಾಯಕನಾದ ಅರಿಯೋಕನಿಗೆ “ಯಾಕೆ ರಾಜನು ಎಲ್ಲಾ ಜ್ಞಾನಿಗಳನ್ನು ನಾಶಮಾಡುತ್ತಿದ್ದಾನೆ” ಎಂದು ಕೇಳಿದನು. ಆಗ ಅರಿಯೋಕನು ದಾನಿಯೇಲನಿಗೆ ನಡೆದದ್ದೆಲ್ಲವನ್ನು ತಿಳಿಸಿದನು. ದಾನಿಯೇಲನು ರಾಜನನ್ನು ಕಾಣಲು ಹೋದನು. ನನಗೆ ಹೆಚ್ಚಿನ ಸಮಯಕೊಟ್ಟರೆ ನಾನು ಆ ಕನಸಿನ ಅರ್ಥವನ್ನು ರಾಜನಿಗೆ ತಿಳಿಸುವೆನು ಎಂದು ಹೇಳಿದನು.



12

ದಾನಿಯೇಲನು ತನ್ನ ಮನೆಗೆ ಹೋಗಿ ಸ್ನೇಹಿತರಾದ ಶದ್ರಕ್, ಮೇಷಕ್, ಅಬೇದ್‌ನೆಗೋರಿಗೆ ಎಲ್ಲಾ ವಿಷಯವನ್ನು ತಿಳಿಸಿದನು. ದಾನಿಯೇಲನು ರಾಜನು ಕಂಡ ಕನಸು ಅಥವಾ ಅದರ ಅರ್ಥವೇನೂ ಗೊತ್ತಿರಲಿಲ್ಲ. ಆದರೆ ಇದೆಲ್ಲವನ್ನು ತಿಳಿದಾತನು ಒಬ್ಬನಿದ್ದಾನೆಂಬುದು ಮಾತ್ರ ಅವನಿಗೆಗೊತ್ತಿತ್ತು. ಆತನೇ ದೇವರು. ಆದರಿಂದ ದಾನಿಯೇಲನು ಮತ್ತು ಆತನ ಸ್ನೇಹಿತರು ಪ್ರಾರ್ಥಿಸಿದರು.



13

ದೇವರು ದಾನಿಯೇಲನಿಗೆ ಕನಸನ್ನು ಅದರೆ ಅರ್ಥವನ್ನು ತೋರಿಸಿದನು. ದಾನಿಯೇಲನು “ದೇವರ ನಾಮಕ್ಕೆ ಯುಗಯುಗಾಂತರಗಳಲ್ಲಿಯೂ ಕೊಂಡಾಟವಾಗಲಿ ಜ್ಞಾನತ್ರಾಣಗಳು ಆತನವೇ ಎಂದು ಪರಲೋಕದ ದೇವರನ್ನು ಸ್ತುತಿಸಿದನು. ದಾನಿಯೇಲನು ತ್ವರೆಯಾಗಿ ರಾಜನ ಬಳಿಗೆ ಬಂದು ‘ರಹಸ್ಯಗಳನ್ನು ವ್ಯಕ್ತಗೊಳಿಸುವವನು ಒಬ್ಬನಿದ್ದಾನೆ, ಆತನು ಪರಲೋಕದಲ್ಲಿದ್ದಾನೆ’ ಅಂದನು. ರಾಜನು ಕಂಡ ಕನಸಿನ ಅರ್ಥವನ್ನು ದಾನಿಯೇಲನು ಬಿಡಿಸಿದನು.



14

ರಾಜನಾದ ನೆಬೂಕದ್ನೆಚ್ಚರನು ಕನಸಿನ ಅರ್ಥವನ್ನು ತಿಳಿದಾಗ ಆತನು ದಾನಿಯೇಲನ ಮುಂದೆ ಅಡ್ಡ ಬಿದ್ದು ಹೇಳಿದನು. "ನಿಮ್ಮ ದೇವರು ದೇವಾದಿದೇವನೂ, ರಾಜರ ಒಡೆಯನೂ, ರಹಸ್ಯಗಳನ್ನು ವ್ಯಕ್ತಗೊಳಿಸುವವನೂ ಆಗಿದ್ದಾನೆಂಬುದು ನಿಶ್ಚಯ". ನಂತರ ರಾಜನು ದಾನಿಯೇಲನನ್ನು ದೊಡ್ಡಸ್ತಿಕೆಗೆ ತಂದನು. ಅವನಿಗೆ ಅಮೂಲ್ಯವಾದ ಬಹುಮಾನಗಳನ್ನು ಕೊಟ್ಟು ಬಾಬೆಲ್ ಸಂಸ್ಥಾನವನ್ನೆಲ್ಲಾ ಅಧೀನಪಡಿಸಿ ಬಾಬೆಲಿನ ಸಕಲ ಮುಖ್ಯಸ್ಥರಿಗೂ ಅವನನ್ನು ಮುಖ್ಯಸ್ಥನನ್ನಾಗಿ ಮಾಡಿದನು.





ಸೆರೆಯಾಳಾದ ದಾನಿಯೇಲನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ದಾನಿಯೇಲ **1–2**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**



# ಮುಕ್ತಾಯ



ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
**ಯೋಹಾನ 3:16**